ಕರ್ನಾಟಕ ರೇಷ್ಮೆ ಮಾರಾಟ ಮಂಡಳಿಯಂ ಬಾಡಿಗೆಯ ಬಗ್ಗೆ

೭೦೦. ಶ್ರೀ ರಾಜುಗೌಡ (ಹನೂರು).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ರೇಷ್ಮೆ, ಪಶಂ ಸಂಗೋಪನಾ ಮತ್ತು ಮತ್ಸ್ಯೋದ್ಯಯ ಮಂತ್ರಿಗಳು ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ರೇಷ್ಮೆ ಮಾರುಕಟ್ಟೆಮಂಡಲಿಯವರಂ ದಾಸ್ತಾನು ಮಳಿಗೆಯೊಂದನ್ನು ಬಾಡಿಗೆಗೆ ತೆಗೆದುಕೊಂಡಿರುವುದು ನಿಜವೆ ? ಹಾಗಿದ್ದಲ್ಲಿ, ಯಾವಾಗ ಹಾಗೂ ಆದಕ್ಕೆ ನೀಡಲಾಗುತ್ತಿರುವ ಬಾಡಿಗೆಯಂ ಪೊತ್ತವೆಷ್ಟು ?

ಆ) ಇದರ ವಿಸ್ತೀರ್ಣ ಹಾಗೂ ಈ ದಾಸ್ತಾನು ಮಳಿಗೆಯ ಸಾಮರ್ಥ್ಯ ಎಷ್ಟು ?

ಇ) ಇದನ್ನು ಬಾಡಿಗೆಗೆ ತೆಗೆದುಕೊಳ್ಳುವುದರ ಔಚಿತ್ಯವೇನು ?

ಶ್ರೀ ಕೆ. ಎಂ. ಕೃಷ್ಣಾರೆಡ್ಡಿ (ರೇಷ್ಮೆ ಪಶುಸಂಗೋಪನಾ ಮತ್ತು ಮತ್ಸ್ಯೋದ್ಯವಂ ಸಚಿವರು).—

ಅ) ಕರ್ನಾಟಕ ರೇಷ್ಮೆ ಮಾರಾಟ ಮಂಡಳಿಯವರು ಹಲವಾರು ದಾಸ್ತಾನಂ ಮಳಿಗೆಗಳನ್ನು ಬಾಡಿಗೆಗೆ ತೆಗೆದುಕೊಂಡಿರುವರು. ಶಾಸಕರ ಪ್ರಶ್ನೆಯಂ ನಿರ್ದಿಷ್ಟವಾದ ದಾಸ್ತಾನಂ ಮಳಿಗೆಗೆ ಸಂಬಂಧಿಸಿಲ್ಲವಾದ ಕಾರಣದಿಂದ ಉತ್ತರಿಸಲು ಸಾಧ್ಯವಿರುವುದಿಲ್ಲ. ನಿರ್ದಿಷ್ಟವಾದ ಮಂಳಿಗೆಯ ಬಗ್ಗೆ ತಿಳಿಸಿದರೆ ಮಾಹಿತಿಯನ್ನು ನೀಡಲಾಗುವುದು.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ರೇಷ್ಮೆ ಗೂಡಿನ ಮಾರಾಟದ ಬಗ್ಗೆ

೭೮೮. ಶ್ರೀ ಜಿ. ರಾಜೂಗೌಡ (ಹನೂರು).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ರೇಷ್ಮೆ ಪಶಂ ಸಂಗೋಪನಾ ಹಾಗೂ ಮತ್ಸ್ಯೋದ್ಯಮ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?

ಅ) ಕೊಳ್ಳೆಗಾಲದ ರೇಷ್ಮೆಗೂಡಿನ ಮಾರುಕಟ್ಟೆಯಲ್ಲಿ ಹರಾಜಿನಲ್ಲಿ ಬಿಕರಿಯಾದ ರೇಷ್ಮೆಗೂಡುಗಳಿಗೆ ಆದೇ ದಿನ ಹಣ ದೊರೆಯುವುದಿಲ್ಲವೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಈ ನ್ಯೂನ್ಯತೆಯು ಎಷ್ಟು ದಿನಗಳಿಂದ ನಡೆಯುತ್ತಿದೆ ಹಾಗೂ ಇದಕ್ಕೆ ಕಾರಣರಾದ ಅಧಿಕಾರಿಗಳ ಮೇಲೆ ಸರ್ಕಾರದವರು ತೆಗೆದುಕೊಂಡಿರುವ ಕ್ರಮಗಳೇನು ?

ಶ್ರೀ ಕೆ. ಎಂ. ಕೃಷ್ಣಾರೆಡ್ಡಿ (ರೇಷ್ಮೆ ಪಶುಸಂಗೋಪನಾ ಮತ್ತು ಮತ್ಸ್ಯೋದ್ಯಮ ಸಚಿವರು).—

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

೧೯೮೪-೮೫ರಲ್ಲಿ ಲಿಡ್‌ಕರ್‌ನಲ್ಲಿ ಸಂಭವಿಸಿದ ಬೆಂಕಿ ಅನಾಹುತದ ಬಗ್ಗೆ

೪. ಶ್ರೀ ಗೋಪಾಲ ಮುಕುಂದ ಕಾನಡೆ (ಸಿರ್ಸಿ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ವಾಣಿಜ್ಯ ಕೈಗಾರಿಕಾ ಹಾಗೂ ವಿದ್ಯುತ್ ಮಂತ್ರಿಗಳು ದಯವಿಟ್ಟು ಉತ್ತರಿಸುವರೇ ?

ಅ) ೧೯೮೪-೮೫ರಲ್ಲಿ ಲಿಡ್ಕರ್ ಸಂಸ್ಥೆಯಲ್ಲಿ ಸಂಭವಿಸಿದ ಬೆಂಕಿ ಅಕಸ್ಮಿಕದ ಬಗ್ಗೆ ತನಿಖೆ ಮಾಡಲು ಸಿ. ಒ. ಡಿ. ಗೆ ಒಪ್ಪಿಸಿದ್ದು ನಿಜವಲ್ಲವೇ ?

ಆ) ಹಾಗಿದ್ದಲ್ಲಿ ಸಿ.ಒ ಡಿ.ಯಂವರು ವರದಿಯನ್ನು ಸಲ್ಲಿಸಿದ್ದಾರೆಯೇ ?

ಇ) ಸಲ್ಲಿಸಿದ್ದಲ್ಲಿ ವರದಿಯ ಬಗ್ಗೆ ಸರ್ಕಾರದವರು ಈವರೆಗೂ ಕ್ರಮಕೈಗೊಳ್ಳದಿರಲಂ ಕಾರಣವೇನು ?

ಶ್ರೀ ಜೆ. ಹೆಚ್. ಪಟೇಲ್ (ಕೈಗಾರಿಕೆ ಮಂತ್ರಿ ವಿದ್ಯುಚ್ಛಕ್ತಿ ಸಚಿವರು).—

ಅ) ನಿಜ

ಆ) ಹೌದು

ಇ) ಸಿ.ಒ.ಡಿ. ವರದಿಯಲ್ಲಿ ಬೆಂಕಿ ಆಕಸ್ಮಿಕಕ್ಕೆ ನಿರ್ದಿಷ್ಟವಾದ ಕಾರಣವನ್ನು ನಮೂದಿಸಿಲ್ಲ. ಬೆಂಕಿವುಂಟಾಗಿರಲು ಕಾರಣವೇನೆಂಬುದರ ಬಗ್ಗೆ ಸಿ ಒ.ಡಿ.ಯು ನಿರ್ದಿಷ್ಟವಾದ ನಿರ್ಣಯಕ್ಕೆ ಬಾರದಿರುವ ಕಾರಣ ಈ ಬಗ್ಗೆ ಕ್ರಮಕೈಗೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ. ಆದಾಗ್ಯೂ ಇನ್ನು ಮುಂದೆ ದಾಸ್ತಾನು ಮಳಿಗೆಯಲ್ಲಿ ಈ ರೀತಿಯ ಬೆಂಕಿ ಆಕಸ್ಮಿಕವನ್ನು ತಡೆಗಟ್ಟುವುದಕ್ಕಾಗಿ ಸಿ.ಒ.ಡಿ. ವರದಿಯಲ್ಲಿರುವ ಸಲಹೆಗಳನ್ನು ಕರ್ನಾಟಕ ಚರ್ಮ ಕೈಗಾರಿಕಾ ನಿಗಮವು ಅನುಷ್ಠಾನಕ್ಕೆ ತಂದಿದೆ.

೧೯೮೫-೮೬ರಲ್ಲಿ ಎನ್.ಜಿ.ಇ.ಎಫ್. ಕೆ.ಎಸ್.ಡಿ.ಎಲ್. ಮತ್ತು ಕಿಯಾನಿಕ್ಸ್‌ಗಳಲ್ಲಿ ಅಧಿಕಾರಿಗಳ ಅಮಾನತ್ತಿನ ಬಗೆಗೆ

೪೨. ಶ್ರೀ ಗೋಪಾಲ ಮಂಕುಂದ ಕಾನಡೆ. (ಸಿರ್ಸಿ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ವಾಣಿಜ್ಯ ಕೈಗಾರಿಕೆ ಮತ್ತು ವಿದ್ಯುತ್ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?

ಅ) ಸರ್ಕಾರದ ಸ್ವಾಮ್ಯದ ನಿಗಮಗಳಾದ ಎನ್.ಜಿ.ಇ.ಎಫ್. ಕೆ.ಎಸ್.ಡಿ.ಎಲ್. ಮತ್ತು ಕಿಯಾನಿಕ್ಸ್‌ನಲ್ಲಿ ೧೯೮೫ ಮತ್ತು ೧೯೮೬ ರಲ್ಲಿ ಎಷ್ಟು ಅಧಿಕಾರಿಗಳನ್ನು ಅಮಾನತ್ತಿನಲ್ಲಿ ಇಡಲಾಗಿದೆ ?

ಆ) ಹಾಗೆ ಅಮಾನತ್ತಿನಲ್ಲಿಡಲು ಕಾರಣಗಳೇನು ? ಹಾಗೂ ಅಮಾನತ್ತಿನಲ್ಲಿಟ್ಟವರ ಬಗ್ಗೆ ಇಲಾಖಾ ವಿಚಾರಣೆಯನ್ನು ನಡೆಸಲಾಗುತ್ತಿದೆಯೇ ?

ಇ) ವಿಚಾರಣೆ ಮುಗಿಯುವ ಮುನ್ನ ಯಾರನ್ನಾದರೂ ಅಮಾನತ್ತಿನಿಂದ ಮುಕ್ತಗೊಳಿಸಲಾಗಿದೆಯೇ ?

ಈ) ಹಾಗಿದ್ದಲ್ಲಿ ಇಲಾಖಾ ವಿಚಾರಣೆಗೆ ಮುನ್ನ ಅಮಾನತ್ತು ಮುಕ್ತಗೊಳಿಸಲು ಕಾರಣವೇನು?

ಶ್ರೀ ಜೆ. ಹೆಚ್. ಪಟೇಲ್ (ಕೈಗಾರಿಕೆ ಮತ್ತು ವಿದ್ಯುಚ್ಛಕ್ತಿ ಸಚಿವರು).—

ಅ) ೧೯೮೫- ಮತ್ತು ೧೯೮೬ರಲ್ಲಿ ಎನ್.ಜಿ.ಇ.ಎಫ್. ಮತ್ತು ಕಿಯಾನಿಕ್ಸ್ ಸಂಸ್ಥೆಗಳಲ್ಲಿ ಯಾವ ಅಧಿಕಾರಿಯನ್ನು ಅಮಾನತ್ತಿನಲ್ಲಿಡಲಾಗಿಲ್ಲ. ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತದಲ್ಲಿ ೧೯೮೬ರಲ್ಲಿ ಒಬ್ಬ ಅಧಿಕಾರಿಯನ್ನು ಅಮಾನತ್ತಿನಲ್ಲಿಡಲಾಗಿದೆ.

ಆ) ಕಾರ್ಖಾನೆಗೆ ಸೇರಿದ ಸ್ಕ್ರಾಪ್‌ವಸ್ತುಗಳನ್ನು ಮಾರಾಟ ಮಾಡುವಾಗ ಅವ್ಯವಹಾರ ನಡೆದಿದೆಯೆಂಬ ಅಪಾದನೆಯ ಮೇಲೆ ಅಮಾನತ್ತಿನಲ್ಲಿಡಲಾಯಿತು. ಇವರ ಬಗ್ಗೆ ತನಿಖಾ ವಿಚಾರಣೆ ನಡೆಸಲಾಗುತ್ತಿದೆ.

ಇ) ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತದ ಅಧಿಕಾರಿಯನ್ನು ವಿಚಾರಣೆಗೆ ಮುನ್ನ ಅಮಾನತ್ತಿನಿಂದ ಮುಕ್ತಗೊಳಿಸಲಾಗಿದೆ.

ಈ) ಸದರಿ ಅಧಿಕಾರಿಯು ಸರ್ಕಾರಕ್ಕೆ ಸಲ್ಲಿಸಿದ ಮೇಲ್ಮನವಿಯನ್ನು ಪರಿಶೀಲನೆ ಮಾಡಲಾಗಿ ಸದರಿ ಅಧಿಕಾರಿಯು ವಿರುದ್ಧ ಹೊರಡಿಸಿದ ಅಮಾನತ್ತಿನ ಆಜ್ಞೆಯು ಕಾನೂನು ರೀತಿಯಲ್ಲಿ ಕ್ರಮಬದ್ಧವಾಗಿಲ್ಲವೆಂದು ಕಂಡುಬಂದಿದ್ದರಿಂದ ಮತ್ತು ಅಧಿಕಾರಿಯನ್ನು ಅನಿರ್ದಿಷ್ಟ ಕಾಲದವರೆಗೆ ಅಮಾನತ್ತಿನಲ್ಲಿಡುವುದು ಸರಿಯಲ್ಲವೆಂದು, ಸದರಿ ಅಧಿಕಾರಿಯನ್ನು ಕೆಲಸಕ್ಕೆ ತೆಗೆದುಕೊಳ್ಳುವ ಹಾಗೆ ಕಂಪನಿಯ ಸಂಘ ನಿಯಮಾವಳಿಯ ೨೧ನೆಯ ಅನುಚ್ಛೇದದ ಪ್ರಕಾರ ಸರ್ಕಾರಕ್ಕೆ ಇರುವ ಅಧಿಕಾರವನ್ನು ಚಲಾಯಿಸಿ ನೀಡಲಾದ ನಿರ್ದೇಶನದ ಮೇರೆಗೆ ಇವರ ಅಮಾನತ್ತನ್ನು ಕಂಪೆನಿಯು ಹಿಂತೆಗೆದುಕೊಳ್ಳಲಾಯಿತು.